ಆದ್ರೆ ನೀ ಅಂದ್ಕೊಂಡಿರೋದು ಏನು ಅನ್ನೋದನ್ನ ಹೇಳಿದ್ರೆ ಮಾತ್ರ ಬರ್ತೀನಿ ನಿನ್ನ ಆಸೆ ಏನೆಂದು ಈಗಲಾದ್ರೂ ಹೇಳ್ತೀಯಾ?' ಪಟ್ಟು ಹಿಡಿದು ಕೇಳಿತು.

ಹೇಳೋದೋ ಬೇಡವೋ ಅಂತ ಅನುಮಾನಿಸುತ್ತಲೇ ತಾಯಿ ಕಾಗೆ ಮೆಲ್ಲಗೆ ಹೇಳಿತು 'ನಂಗೆ ನಿನ್ನ ಕಪ್ಪು ಬಣ್ಣ ಹೋಗಲಾಡಿಸಿ ಬೆಳ್ಳಗೆ ಮಾಡೋ ಆಸೆ, ಬೆಳ್ಳಗಾದರೆ ನೀನಿನ್ನೂ ಚೆಂದ ಕಾಣ್ತೀಯಾ ಇನ್ನೊಂದು ಸ್ವಲ್ಪ ದಿನ ಅಷ್ಟೇ ಆ ಪವಿತ್ರ ನದೀಲಿ ಉಜ್ಜೀ ಉಜ್ಜಿ ಸ್ನಾನ ಮಾಡಿದ್ರೆ ನೀನು ಬೆಳ್ಳಗೆ ಆಗೇ ಆಗ್ತೀಯಾ' ತಾಯಿಯ ಆಶಾವಾದದ ಮಾತಿಗೆ ಮರಿ ಕಾಗೆಗೆ ನಗಬೇಕೋ ಅಳಬೇಕೋ ತಿಳಿಯದೇ ರೇಗಿಯೇ ಬಿಟ್ಟಿತು.

'ಅಯ್ಯೋ ನಿಜಕ್ಕೂ ನೀನು ದಡ್ಡಿ ಅಮ್ಮನೇ ಸರಿ! ಒಂದ್ನಿಮಿಷ ಬಾ ಇಲ್ಲಿ. ಇಲ್ನೋಡಿಲ್ಲಿ, ಈ ನೀರಲ್ಲೇ ನಿನ್ ಮುಖಾನ ಒಂದ್ಸಲ ಚೆನ್ನಾಗಿ ನೋಡ್ಕೊ ನೀನೂ ಇಷ್ಟು ವರ್ಷ ಚೆನ್ನಾಗಿ ಸ್ನಾನ ಮಾಡಿದ್ಯಾ ತಾನೇ? ಬೆಳ್ಳಗಾಗಿದ್ಯೇನು? ನೋಡ್ಕೊಂಡ್ ಮೇಲೆ ಹೇಳು ನೀ ಮಾಡ್ತಿರೋದು ಸರೀನಾ ಅಂತ'

ಅಳುಕುತ್ತಲೇ ನೀರಲ್ಲಿ ಮೊದಲ ಬಾರಿಗೆ ಮುಖ ನೋಡಿಕೊಂಡ ತಾಯಿ ಕಾಗೆ ತನ್ನ ಕಪ್ಪು ಬಣ್ಣ ನೋಡಿ ಹೌಹಾರಿತ್ತು! ಅದಕ್ಕೆ ಆದ ಆಘಾತದಿಂದ ಮಾತೇ ಹೊರಡಲಿಲ್ಲ. ಪಾಪದ ತಾಯಿಯ ಆಘಾತ ನೋಡಿ ಮರಿ ಕಾಗೆಗೆ ಕನಿಕರ ಉಂಟಾಯಿತು. ಸಾವಕಾಶವಾಗಿ ಅಮ್ಮನಿಗೆ ತಿಳಿ ಹೇಳಿತು.

'ಅಮ್ಮಾ, ನಾವು ಹೇಗಿರ್ತೀವೋ ಹಾಗೇನೇ ಹುಟ್ಟು, ಬಣ್ಣ ಎಲ್ಲವೂ. ನಮ್ಮ ವಂಶಸ್ಥರು, ಪೂರ್ವಜರು ಯಾರೇ ಆಗಲಿ ಬೆಳ್ಳಗಿರುವ ದಾಖಲೆ ಇದೆಯೇ? ಸುಮ್ಮನೇ ವ್ಯರ್ಥ ಪ್ರಯತ್ನ ಬೇಡಮ್ಮ. ದೇವರು ನಮ್ಮನ್ನ ಹೇಗೆ ಸೃಷ್ಟಿಸಿದ್ದಾನೋ ಹಾಗೇ ಒಪ್ಪಿಕೊಳ್ಳೋದನ್ನು ಕಲಿತರೆ ನೆಮ್ಮದಿ ಇರುತ್ತೆ. ಬಣ್ಣ, ರೂಪ ಇದ್ಯಾವುದೂ ಮುಖ್ಯ ಅಲ್ವೇ ಅಲ್ಲಮ್ಮ, ಒಳ್ಳೆಯ ಮನಸ್ಸು ಮುಖ್ಯ. ಒಳ್ಳೆಯ ಮನಸ್ಸು, ನೆಮ್ಮದಿ ಮುಖದಲ್ಲಿ ಕಾಂತಿ ಕೊಡುತ್ತಮ್ಮ ಚಿಂತೆ ಬಿಡು' ಎಂದಿತು.

ತಾಯಿ ಕಾಗೆಗೆ ಮರಿ ಕಾಗೆಯ ಸಮಾಧಾನದ ಬುದ್ಧಿ ಮಾತು ಹಿಡಿಸಿತು, ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸಿದ ಪುಟಾಣಿಯ ಮೇಲೆ ಹೆಮ್ಮೆ ಅಭಿಮಾನ ಮೂಡಿ ವಾತ್ಸಲ್ಯದಿಂದ ಮರಿಯ ತಲೆ ಸವರಿತು. ತಾನೆಂತಹ ತಪ್ಪು ಮಾಡುತ್ತಿದ್ದೆ ಎಂಬುದರ ಅರಿವಾಗಿ ಕಣ್ತೆರೆಸಿದ ಪುಟಾಣಿಯೆಡೆ ಕೃತಜ್ಞತೆಯಿಂದ ನೋಡಿತು. ಮರಿಕಾಗೆಯೋ, ಪದೇ ಪದೇ ಮುಳುಗೇಳುವ ಮತ್ತು ಉಜ್ಜಿ ಉಜ್ಜಿ ತಿಕ್ಕಿ ಸ್ನಾನ ಮಾಡುವ ಕಷ್ಟದಿಂದ ಪಾರಾದದ್ದಕ್ಕೆ ಸಂತಸದಿಂದ ಕುಣಿದು ಕುಪ್ಪಳಿಸುತ್ತಿತ್ತು. ■



**ತ್ರಿಶಿತಾ ವಿ.ಎನ್.**
4ನೇ ತರಗತಿ,
ಎಲೈಟ್ ಸ್ಕೂಲ್
ಹಾಸನ







**ಶ್ರೇಯಸ್ ಎಚ್.ಆರ್.**
2ನೇ ತರಗತಿ,
ಎಸ್‌ಎಸ್‌ವಿವಿಕೆ,
ಬೆಂಗಳೂರು



**ನಿಖಿಲ್ ಪ್ರಸಾದ್ ಜಿ.ವಿ.**
4ನೇ ತರಗತಿ,
ಚನ್ನಪಟ್ಟಣ, ಸೊರಬ

